**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 999/2022**

| | | | |
|---|---|---|---|
| **ಹೆಸರು** | **:** | **ಶ್ರೀಮತಿ ಅಕ್ಕಮಹಾದೇವಿ** | **ದೋ.ಸಾ. 12** |
| **ಗಂಡ ಹೆಸರು** | **:** | **ದಿಲೀಪಕುಮಾರ** | **ಪ್ರಾ.ಸಾ. 3** |
| **ವಯಸ್ಸು** | **:** | **39 ವರ್ಷ** | **ದಿನಾಂಕಃ 10-03-2022** |
| **ಉದ್ಯೋಗ** | **:** | **ಪಿ.ಐ. ಲೋಕಾಯುಕ್ತ** | |
| **ವಾಸಸ್ಥಳ** | **:** | **ಗುಲ್ಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಜುಲೈ 2013 ರಿಂದ ಜುಲೈ 2017 ರವರೆಗೆ ನಾನು ರಟಕಲ ಪೊಲೀಸ್ ಠಾಣಾ ಪಿ.ಎಸ್.ಐ ಆಗಿ ಕೆಲಸ ಮಾಡಿದ್ದೆ.

ದಿನಾಂಕ 02-10-2016 ರಂದು ಸಂಜೆ 7.30 ಗಂಟೆಗೆ ಸುಮಾರಿಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1ರವರು ನಮ್ಮ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ನಂ. 131/2016 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತೇನೆ. ಈಗ ನೋಡುತ್ತಿರುವ ನಿಪಿ 1 ದೂರನ್ನು ನಾನೇ ಪಡೆದುಕೊಂಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪ್ರಥಮ ವರ್ತಮಾನ ವರದಿಯನ್ನು ನಾನೇ ದಾಖಲಿಸಿದ್ದು ಅದನ್ನು ನಿಪಿ-8 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ದಿನಾಂಕ 03-10-2016 ರಂದು ಬೆಳಗ್ಗೆ 10 ರಿಂದ 11 ಗಂಟೆ ಸಮಾರಿಗೆ ಚಾಸಾ-1 ರವರು ತೋರಿಸಿದಂತ ಸ್ಥಳವಾದ ಕೋರವಿ ಗ್ರಾಮದ ಚನ್ನಪ್ಪರವರ ಹೊಲದಲ್ಲಿರುವ ಟಾವರ ಹತ್ತಿರ ಚಾಸಾ-2 ಮತ್ತು 3 ರವರು ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಈ ನೋಡುತ್ತಿರುವ ಪಂಚನಾಮೆ ನಾನೆ ಮಾಡಿದ್ದು ಅದನ್ನು ನಿಪಿ-9 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

ದಿನಾಂಕ 22-02-2017 ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ನಾನು ಮತ್ತು ನಮ್ಮ ಸಿಬ್ಬಂದಿಯವರು ಮಹಗಾಂವ ಕ್ರಾಸ್ ಹತ್ತಿರ ಇದ್ದ ವ್ಯಕ್ತಿಗಳ ವಿರುದ್ದ ಮಾಹಿತಿ ಬಂದಿದ್ದು ಅಲ್ಲಿ ಹೊಗಿ ನೋಡಲಾಗಿ ಇಬ್ಬರು ವ್ಯಕ್ತಿಗಳು ನಮ್ಮನ್ನು ನೋಡಿ ಓಡಿ ಹೋಗುತ್ತಿದ್ದು ಅವರ ಮೇಲೆ ಅನುಮಾನ ಬಂದು ಅವರನ್ನು ವಶಕ್ಕೆ

ಪಡೆದುಕೊಂಡು ಠಾಣೆಗೆ ಕರೆತಂದು ವಿಚಾರಿಸಿದಾಗ ಅವರು ತಮ್ಮ ಹೆಸರು ಶಕೀಲ ಪಾಶಾ ಮತ್ತು ಫಿದಾಹುಸೇನ್ ಎಂದು ತಿಳಿಸಿ ತಮ್ಮ ಸ್ವ-ಖುಷಿ ಹೇಳಿಕೆಗಳನ್ನು ನೀಡಿರುತ್ತಾರೆ. ಈಗ ನೋಡುತ್ತಿರುವ ಸ್ವ-ಖುಷಿ ಹೇಳಿಕೆಗಳು ನಾನೇ ಪಡೆದುಕೊಂಡಿದ್ದು ಮತ್ತು ಅವುಗಳಲ್ಲಿ ನನ್ನ ಸಹಿ ಇದೆ. ಸದರಿ ಸ್ವ-ಖುಷಿ ಹೇಳಿಕೆಗಳು ನಿಪಿ-10 ಮತ್ತು 11 ಎಂದು ಮತ್ತು ಅವುಗಳಲ್ಲಿ ನನ್ನ ಸಹಿಗಳನ್ನು ನಿಪಿ-10(ಎ) ಮತ್ತು ನಿಪಿ-11(ಎ) ಎಂದು ಗುರುತಿಸಲಾಯಿತು. ಆರೋಪಿತರು ಹೇಳಿರುವ ಸ್ವ-ಖುಷಿ ಹೇಳಿಕೆಗಳ ಮೇರೆಗೆ ಆರೋಪಿತರು ಹೊಸಳ್ಳಿ ಕ್ರಾಸ್ ಹತ್ತಿರ ಬಸ್ಸನಿಲ್ದಾಣ ಹಿಂದುಗಡೆ ಬ್ಯಾಟರಿ ಸೇಲ್ಗಳನ್ನು ಕರಗಿಸಿ ಮುಚ್ಚಿಟ್ಟಿದ್ದರು. ಸದರಿ ಸ್ಥಳಕ್ಕೆ ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಹೋಗಿ ಐದು 24 ಸೆಲ್ಗಳು ಕರಗಿಸಿದ ಸೀಸಗಳನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಉಳಿದ ಮೂರು ಬ್ಯಾಟರಿ ಸೀಸಗಳನ್ನು ಬೇರೆ ಪ್ರಕರಣಕ್ಕೆ ಸಂಬಂಧಿಸಿದ್ದು ಇದ್ದ ಕಾರಣ ಅವುಗಳನ್ನು ಬೇರೆ ಪೋಲಿಸ ಠಾಣೆಗೆ ನ್ಯಾಯಾಲಯದಿಂದ ಅನುಮತಿ ಪಡೆದು ಕಳುಹಿಸಿರುತ್ತೇವೆ. ಇನ್ನೊಂದು ಬ್ಯಾಟರಿ ಸೀಸ ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದ್ದು ಇದ್ದ ಕಾರಣ ಸದರಿ ಬ್ಯಾಟರಿ ಸೀಸ್ ಆ ಪ್ರಕರಣದಲ್ಲಿ ಜಮಾ ಮಾಡಿರುತ್ತೇನೆ.

ನಂತರ ಮರಳಿ ಠಾಣೆಗೆ ಬಂದು ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ದಿನಾಂಕ 24-03-2017 ರಂದು ಪರಗಿ ಪೋಲಿಸ ಠಾಣೆಗೆ ಆರೋಪಿತರು ಕೃತ್ಯ ನಡೆಸಲು ಉಪಯೋಗಿಸಿದ ಬುಲೇರೊ ವಾಹನದ ಮಾಹಿತಿ ಕುರಿತು ಪತ್ರವನ್ನು ಕಳುಹಿಸಿರುತ್ತೇನೆ. ದಿನಾಂಕ 28-03-2017 ರಂದು ಪರಗಿ ಪೊಲೀಸ ಠಾಣೆಯಲ್ಲಿ ದಾಖಲಾದ ಪ್ರಥಮ ವರ್ತಮಾನ ವರದಿ, ದೂರು, ರಿಮಾಂಡಯಾದಿ ಪಡೆದುಕೊಂಡಿರುತ್ತೆನೆ. ಅವುಗಳನ್ನು ನಿಪಿ-12, ನಿಪಿ-13, ಮತ್ತು ನಿಪಿ-14 ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**